ಅಂತ್ಯಂತ ತುರ್ತು

ಉಡುಪಿ ಜಿಲ್ಲಾ ಪಂಚಾಯತ್ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಛೇರಿ,ಉಡುಪಿ ಜಿಲ್ಲೆ, ಉಡುಪಿ.

ಸಂಖ್ಯೆ:ಎ1/ಪ್ರೌಶಾಶಿ/ಜೇ.ಪ-2003/01/2015-16 ದಿನಾಂಕ: 15-07-2015

ರಿಗೆ,

ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿ/ಬಿಆ.ರ್.ಸಿಯವರಿಗೆ
ಜಿಲ್ಲೆಯ ಎಲ್ಲಾ ಪ್ರೌಢಶಾಲೆ ಮುಖ್ಯಶಿಕ್ಷಕರು/
ಉಪಪ್ರಾಂಶುಪಾಲರು/ಹಿರಿಯ ಸಹ ಶಿಕ್ಷಕರು

ವಿಷಯ: 2003ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರಾಗಿ ನೇಮಕಾತಿಗೊಂಡ (ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್ 1 ಸೇರಿದಂತೆ) ಜ್ಯೇಷ್ಠತಾ ಪಟ್ಟಿಯನ್ನು ಮೆರಿಟ್/ರೋಸ್ಟರ್‌ನಂತೆ ತಯಾರಿಸುವ ಬಗ್ಗೆ.

ಉಲ್ಲೇಖ:1) ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಇವರ ಪತ್ರ ಸಂ: ಜಿ12:ಪ್ರೌಶಾಶಿನೇಮಕ:1:2015-16 ದಿನಾಂಕ:13.07.2015

2) ಸರಕಾರದ ಆದೇಶ ಸಂ:ಇಡಿ:152:ಎಲ್.ಬಿ.ಪಿ:2014. ದಿನಾಂಕ:20.05.2014.

* * *

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿ, 2003ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರಾಗಿ ನೇಮಕಾತಿಗೊಂಡವರ ಜ್ಯೇಷ್ಠತಾ ಪಟ್ಟಿಯನ್ನು ಮೆರಿಟ್/ರೋಸ್ಟರ್‌ನಂತೆ ತಯಾರಿಸುವ ಬಗ್ಗೆ ಉಲ್ಲೇಖಿತ ಪತ್ರಗಳಲ್ಲಿನ ಸೂಚನೆಯಂತೆ ಕ್ರಮವಹಿಸಬೇಕಾಗಿದೆ. ಇದು ಕಾಲಮಿತಿಗೊಳಪಟ್ಟ ವಿಷಯವಾದ್ದರಿಂದ ಈ ಮಾಹಿತಿಯನ್ನು ನೇರವಾಗಿ ಶಾಲಾ ಮುಖ್ಯಸ್ಥರಿಂದ ಪಡೆದು ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ಕ್ರೋಢೀಕರಣ ಮಾಡಲಾಗುತ್ತಿದೆ. ಆದ್ದರಿಂದ ಈ ಕೆಳಕಂಡ ಮಾಹಿತಿಯನ್ನು ಸರಕಾರಿ ಪ್ರೌಢಶಾಲಾ ಮುಖ್ಯಸ್ಥರು ನಿಗದಿಪಡಿಸಿದ ದಿನಾಂಕದಂದು ಈ ಕಛೇರಿಗೆ ಹಾಜರಾಗಿ ತಪ್ಪದೇ ಮಾಹಿತಿ /ಸೇವಾ ದಾಖಲೆ ಒದಗಿಸಲು ತಿಳಿಸಿದೆ,

ಒದಗಿಸಬೇಕಾದ ಮಾಹಿತಿ ವಿವರ:

1) 2003ರ ನಂತರ ನೇಮಕಾತಿ, ಬಡ್ತಿಗೊಂಡ ಮತ್ತು 2003ರ ನಂತರ ನೇಮಕಾತಿ/ಬಡ್ತಿ ಹೊಂದಿ ನಂತರ ಈ ಜಿಲ್ಲೆಗೆ ವರ್ಗಾವಣೆಯಾಗಿ ಬಂದ ಸರಕಾರಿ ಪ್ರೌಢಶಾಲಾ ಶಿಕ್ಷಕರ ಮೂಲ ಸೇವಾಪುಸ್ತಕ ಪರಿಶೀಲನೆಗೆ ತರುವುದು.(ವಿಶೇಷ/ವೃತ್ತಿ ಶಿಕ್ಷಕರ ಸೇವಾಪುಸ್ತಕ ಬೇಡ)
2) 2003ರ ನಂತರ ಈ ಜಿಲ್ಲೆಗೆ ನೇರ ನೇಮಕಾತಿಗೊಂಡು ಬೇರೆ ಜಿಲ್ಲೆಗೆ/ವಿಭಾಗಕ್ಕೆ ವರ್ಗಾವಣೆಗೊಂಡವರಿದ್ದಲ್ಲಿ ಅಂತಹವರ ವಿವರ, ಬಿಡುಗಡೆ ದಿನಾಂಕ, ಮಾಹಿತಿ ತರುವುದು.

ಈ ಕಛೇರಿಗೆ ಹಾಜರಾಗಬೇಕಾದ ದಿನಾಂಕ: (ಗಂಟೆ : 10.00 ರಿಂದ 1.00)

1) ಬಹ್ಮಾವರ ವಲಯದ ಸರಕಾರಿ ಪ್ರೌಢಶಾಲಾ ಮುಖ್ಯಸ್ಥರು : ದಿನಾಂಕ: 16.07.2015
2) ಉಡುಪಿ ವಲಯದ ಸರಕಾರಿ ಪ್ರೌಢಶಾಲಾ ಮುಖ್ಯಸ್ಥರು : ದಿನಾಂಕ: 16.07.2015
3) ಕಾರ್ಕಳ ವಲಯದ ಸರಕಾರಿ ಪ್ರೌಢಶಾಲಾ ಮುಖ್ಯಸ್ಥರು : ದಿನಾಂಕ: 16.07.2015
4) ಕುಂದಾಪುರ ವಲಯದ ಸರಕಾರಿ ಪ್ರೌಢಶಾಲಾ ಮುಖ್ಯಸ್ಥರು : ದಿನಾಂಕ: 17.07.2015
5) ಬೈಂದೂರು ವಲಯದ ಸರಕಾರಿ ಪ್ರೌಢಶಾಲಾ ಮುಖ್ಯಸ್ಥರು : ದಿನಾಂಕ: 17.07.2015

ಆಯಾ ವಲಯದ ಟಿ.ಜಿ.ಟಿ ಶಿಕ್ಷಕರ ಸೇವಾಪುಸ್ತಕಗಳನ್ನು ಸಂಬಂಧಿಸಿದ ಬಿ.ಆರ್.ಸಿ ಅಥವಾ ಬಿ.ಇ.ಓ ಕಛೇರಿ ಸಿಬ್ಬಂದಿಯವರು ಮೇಲಿನ ದಿನಾಂಕದಂದು ಈ ಕಛೇರಿಗೆ ಪರಿಶೀಲನೆಗೆ ಸಲ್ಲಿಸುವುದು.

Shantha
15/7/2015
ಉಪನಿರ್ದೇಶಕರು[ಆಡಳಿತ]
ಸಾರ್ವಜನಿಕ ಶಿಕ್ಷಣ ಇಲಾಖೆ
ಉಡುಪಿ ಜಿಲ್ಲೆ

ಪ್ರತಿಯನ್ನು : ಕಛೇರಿ ಪತ್ರಾಂಕಿತ ವ್ಯವಸ್ಥಾಪಕರಿಗೆ, ಸಂಬಂಧಿಸಿದ ಅಧೀಕ್ಷಕರಿಗೆ ಅಗತ್ಯ ಕ್ರಮಕ್ಕಾಗಿ.